# ಚಿಟ್ಟೆಯ ಬೆಂಬತ್ತಿದ ಹುಡುಗ



✍ ಸುನಯನ ವಾಲ್ಟರ್ಸ್

ದೇವರ ಸೃಷ್ಟಿಯಲ್ಲಿ ಹಾರಾಡುವ ಹೂಗಳಂತಿರುವ ಚಿಟ್ಟೆಗಳನ್ನು ಕಂಡಾಗ ನಮ್ಮ ಕಣ್ಣುಗಳು ಅರಳುವುದು ಸಹಜ. ಚಿಕ್ಕ ಮಕ್ಕಳು ಚಿಟ್ಟೆಗಳ ಆಕರ್ಷಣೆಗೆ ಒಳಗಾಗಿ ಅವುಗಳ ಹಿಂದೆ ಓಡುತ್ತಾ ಅವುಗಳನ್ನು ಹಿಡಿಯಲು ಪ್ರಯತ್ನಿಸುವುದು ಒಂದು ಸಾಮಾನ್ಯ ದೃಶ್ಯವಾಗಿದೆ. ಕೆಲವು ಮಕ್ಕಳು ಚಿಟ್ಟೆ ಹಿಡಿಯುವ ಬಲೆಯ ಸಹಾಯದಿಂದ ಅವುಗಳನ್ನು ಸೆರೆಹಿಡಿದು ಮನೆಯ ಆವರಣದೊಳಗೆ ಬಿಟ್ಟು ಅವುಗಳ ಹಾರಾಟವನ್ನು ನೋಡುತ್ತಾ ಸಂತಸಪಡುವುದಿದೆ.

ರೆಕ್ಕೆ ಬಡಿಯುತ್ತಾ ಹಾರಾಡುತ್ತಿದ್ದ ಇಂತಹ ವರ್ಣಮಯ ಚಿಟ್ಟೆಯೊಂದರ ಬೆಂಬತ್ತಿ ಹೋದ ಚಿನ್ ಎನ್ನುವ 6 ವರ್ಷದ ಬಾಲಕನೊಬ್ಬನ ಕಥೆ ಇದು. ಅಮೇರಿಕದ ದಕ್ಷಿಣ ಪ್ರಾಂತ್ಯದಲ್ಲಿ ರೈತನೊಬ್ಬನ ಮಗನಾಗಿದ್ದ ಚಿನ್‌ಗೆ ಚಿಟ್ಟೆಗಳೆಂದರೆ ಪ್ರೀತಿ. ಅವನಿದ್ದ ಮನೆಗೆ ಹೊಂದಿದಂತೆ ದೊಡ್ಡ ದನದ ಕೊಟ್ಟಿಗೆ ಇತ್ತು. ವಿಸ್ತಾರವಾದ ಹುಲ್ಲುಗಾವಲು ಸುತ್ತಲೂ ಇದ್ದು ಅದರ ಅಂಚಿಗೆ ಬೆಟ್ಟದ ಸಾಲು ಹಾಗೂ ಆಳವಾದ ದರಿಯೂ ಇತ್ತು. ಮನೆಯ ಹಿಂಭಾಗದಲ್ಲಿ ಹೂತೋಟವನ್ನು ದಾಟಿ ಒಂದು ಬೇಲಿಯ ಆವರಣವಿತ್ತು. ಚಿನ್ ಹೆಚ್ಚಾಗಿ ಹಿಂಬದಿಯ ಹೂ ತೋಟದಲ್ಲಿ ಆಟ ಆಡುವುದಿತ್ತು. ಬೇಲಿಯ ಬದಿಗೆ ವಿಧವಿಧದ ಹೂವಿನ ಗಿಡಗಳಿದ್ದುದರಿಂದ ಅಲ್ಲಿ ಸದಾಕಾಲ ಬಣ್ಣಬಣ್ಣದ ಚಿಟ್ಟೆಗಳು ಕಂಡುಬರುತ್ತಿದ್ದವು. ಈ ಚಿಟ್ಟೆಗಳನ್ನು ಒಂದೊಂದಾಗಿ ಹಿಡಿದು ಒಂದು ಗಾಜಿನ ಭರಣಿಯೊಳಗೆ ಬಿಟ್ಟು ಮನಸ್ಸಿಗೆ ತೃಪ್ತಿಯಾಗುವವರೆಗೂ ಅವುಗಳನ್ನು ವೀಕ್ಷಿಸಿ ನಂತರ ಹಾರಿ ಹೋಗಲು ಬಿಡುವುದು ಅವನ ನಿತ್ಯಕಾಯಕವಾಗಿತ್ತು.

ಆ ದಿನ ಬೇಲಿಯ ಬಾಗಿಲು ಸ್ವಲ್ಪ ಓರೆಯಾಗಿ ತೆರೆದಿತ್ತು. ಚಿನ್‌ನ ಮನಸೆಳೆದ ಸುಂದರವಾದ ಚಿಟ್ಟೆಯು ಬೇಲಿಯ ಹೊರಗಿದ್ದ ಕಾಡುಹೂವಿನ ಮೇಲೆ ರೆಕ್ಕೆ ಬಡಿಯುತ್ತಾ ಕುಳಿತಿತ್ತು. ಚಿನ್‌ನ ದೃಷ್ಟಿ ಚಿಟ್ಟೆಯ ಮೇಲೆ ಕೇಂದ್ರೀಕೃತವಾಗಿತ್ತು. ಓರೆಯಾಗಿದ್ದ ಬೇಲಿಯನ್ನು ತಳ್ಳಿ ಹೊರಗೆ ಧಾವಿಸಿದ ಅವನು ಹೆಜ್ಜೆಯ ಮೇಲೆ ಹೆಜ್ಜೆಯನ್ನಿಡುತ್ತಾ ಚಿಟ್ಟೆಯನ್ನು ಸಮೀಪಿಸಿದನು. ಅದರ ಮಡಚಿದ ರೆಕ್ಕೆಗಳನ್ನು ಒಂದುಗೂಡಿಸಿ ಎರಡು ಬೆರಳುಗಳಿಂದ ಇನ್ನೇನು ಹಿಡಿಯಬೇಕು......... ಅಷ್ಟರಲ್ಲೇ ಚಿಟ್ಟೆಯು ಹಾರಿ ಇನ್ನೊಂದು ಗಿಡದ ಮೇಲೆ ಕುಳಿತಿತು. ಈಗ ಆ ಚಿಟ್ಟೆಯನ್ನು ಹಿಡಿಯುವ ಕಾರ್ಯದ ಚಾಲನೆಯಾಯಿತು.

“ಚಿನ್, ನೀನು ಆ ಬೇಲಿ ದಾಟಿ ಹೊರಗೆ ಹೋಗಕೂಡದು!” ಎಂಬ ತಾಯಿಯ ಎಚ್ಚರಿಕೆ ಮಾತುಗಳ ಆ ಪುಟ್ಟ ಹುಡುಗನಿಗೆ ಜ್ಞಾಪಕಕ್ಕೇ ಬರಲಿಲ್ಲ. ಏಕೆಂದರೆ ಅವನ ಮನಸ್ಸಿನಲ್ಲಿ ಚಿಟ್ಟೆ ಹಿಡಿಯುವ ಒಂದೇ ಯೋಚನೆ ಇತ್ತು. ಪ್ರತಿ ಬಾರಿ ಅವನು ಚಿಟ್ಟೆಯನ್ನು ಸಮೀಪಿಸಿದಾಗಲೂ ಅದು ಹಾರಿಹೋಗಿ ಮುಂದಿನ ಗಿಡದ ಮೇಲೆ

ಕುಳಿತುಕೊಳ್ಳುತ್ತಿತ್ತು. ಆ ಆಕರ್ಷಕ ಚಿಟ್ಟೆಯು ತನ್ನನ್ನು ಮನೆಯ ಸುರಕ್ಷತೆಯಿಂದ ದೂರ ದೂರಕ್ಕೆ ಒಯ್ಯುತ್ತಿರುವುದು ಆ ಚಿಕ್ಕ ಹುಡುಗನ ಪರಿವಿಗೇ ಬರಲಿಲ್ಲ.

ಓಡಿ ಓಡಿ ದಣಿದ ಚಿನ್ ಕೊನೆಗೂ ಸೋಲೊಪ್ಪಿಕೊಂಡು ತನ್ನ ಮನೆಗೆ ಹೋಗುವ ಯೋಚನೆಯಿಂದ ನಿಂತನು. ತಿರುಗಿ ನೋಡಿದಾಗ ಅಲ್ಲಿ ಯಾವುದೇ ದಾರಿ ಅಥವಾ ಸವೆದ ಕಾಲುಹಾದಿಯು ಇಲ್ಲದಿರುವುದನ್ನು ಗಮನಿಸಿದ ಅವನ ಮನೆಯ ಬಹಳ ದೂರದಲ್ಲಿರದಿದ್ದರೂ ಅವನಿಗೆ ಕಾಣುವಂತಿರಲಿಲ್ಲ. ಏಕೆಂದರೆ ಅವನು ಬೆಟ್ಟದ ಸಮೀಪದ ಒಂದು ದರಿಯಲ್ಲಿ ಇಳಿದಿದ್ದ. ತನಗೆ ಸರಿ ಎನಿಸಿದ ಒಂದು ದಿಕ್ಕಿನಲ್ಲಿ ಅವನು ನಡೆಯಲಾರಂಭಿಸಿದ. ಆದರೆ ಅದು ತಪ್ಪು ದಿಕ್ಕಾಗಿತ್ತು. ಹೆಚ್ಚು ನಡೆದಂತೆ ಹೆಚ್ಚು ದೂರಕ್ಕೆ ಸಾಗಿದ ಅವನು ಕಳೆದುಹೋದ!

ಇತ್ತ ತಾಯಿಗೆ ಅವನು ಮನೆಯಲ್ಲಿಲ್ಲದಿದ್ದುದು ತಿಳಿಯಲು ಹೆಚ್ಚು ತಡವಾಗಲಿಲ್ಲ. ಹೊಲದಲ್ಲಿದ್ದ ಗಂಡನಿಗೆ ಕೂಡಲೇ ಸುದ್ದಿ ಮುಟ್ಟಿಸಿದಳು. ಇಬ್ಬರೂ ಕೂಡಿ ಬೆಟ್ಟದ ಸಾಲು, ದರಿ, ಹುಲ್ಲುಗಾವಲುಗಳಲ್ಲಿ ತಮ್ಮಿಂದಾದಷ್ಟು ಹುಡುಕಿ ಸೋತರು. ಚಿನ್ ಕಾಣೆಯಾದ ಸಮಾಚಾರವನ್ನು ಪೋಲಿಸರಿಗೆ ತಿಳಿಸಲಾಯಿತು. ತಾಸಿನೊಳಗೇ ಪೋಲೀಸ್ ಪಡೆ ಬಂದಿತು. ಆ ಪಡೆಯೊಂದಿಗೆ ನೆರೆಯ ಕೃಷಿಕರೂ ಸೇರಿ ಒಂದು ದೊಡ್ಡ ಗುಂಪಾಯಿತು. ಎಲ್ಲ ದಿಕ್ಕುಗಳಲ್ಲಿಯೂ ಚಿಕ್ಕ ಚಿಕ್ಕ ಗುಂಪುಗಳಾಗಿ ಜನರು ಹುಡುಕಲು ಹೋದರು. ಕೆಲವರು ನಡೆಯುತ್ತಾ ಹೋದರೆ, ಇನ್ನು ಕೆಲವರು ಕುದುರೆ ಏರಿ ಹೋದರು. ಇನ್ನು ಕೆಲವರು ತಮ್ಮ ಜೀಪ್‌ಗಳಲ್ಲಿ ಹೋದರು. ಮಧ್ಯಾಹ್ನ ಕಳೆದು ಸಂಜೆಗತ್ತಲಾಯಿತು. ತಂದೆ ತಾಯಿಯರು ಆತಂಕಗೊಂಡರು-ಕತ್ತಲು ಪೂರ್ತಿ ಆವರಿಸುವ ಮೊದಲು ಚಿನ್ ಸಿಕ್ಕುವನೆ? ಆತನಿಗೇನಾಯಿತು? ಸುರಕ್ಷಿತವಾಗಿರುವನೆ? ಕಾಡು ಪ್ರಾಣಿಯ ಆಕ್ರಮಣಕ್ಕೊಳಗಾದನೇ? ನೂರಾರು ಯೋಚನೆಗಳಿಂದ ಸೋತು ಹೋದರು.

ಮಧ್ಯರಾತ್ರಿ ಸಮೀಪಿಸಿದರೂ ಚಿನ್‌ನ ಸುಳಿವು ಸಿಕ್ಕಲಿಲ್ಲ. ಆತ ರಾತ್ರಿಯ ಚಳಿಯಲ್ಲಿ ನಡುಗುತ್ತಾ ಕುಳಿತಿದ್ದ ಅವನಿಗೆ ಕೂಗಿ ಕರೆದು ಆಯಾಸವಾಗಿತ್ತು. ಹೊಟ್ಟೆ ಹಸಿದಿತ್ತು. ಒಂದು ಚಿಕ್ಕ ಬಂಡೆಯ ಮೇಲೆ ಕುಳಿತ ಅವನು ಈಗ ಜೋರಾಗಿ ಅಳುತ್ತಿದ್ದನು. ಹುಡುಕುತ್ತಿದ್ದ ಪೋಲೀಸ್ ಮುಖ್ಯಸ್ಥನು ಕೊನೆಗೂ ಒಂದು ಬೆಟ್ಟದ ಅಂಚಿಗೆ ಜೀಪ್ ನಿಲ್ಲಿಸಿ ಶಕ್ತಿಯುತ ಸರ್ಚ್ ಲೈಟ್‌ನ್ನು ಅಂಚಿನಲ್ಲಿರಿಸಿರಿ. ಕೆಳಗೆ ಬೆಳಕು ಬೀರುವಂತೆ ಸುತ್ತಲೂ ತಿರುಗಿಸಿದನು. ಪಕ್ಕನೆ ಕೈ ಬೀಸುತ್ತಾ ನಿಂತು ಕೂಗಿಕೊಳ್ಳುತ್ತಿದ್ದ ಚಿಕ್ಕ ಹುಡುಗನು ಕಣ್ಣಿಗೆ ಬಿದ್ದನು. ಎಲ್ಲರಿಗೂ ಸಮಾಚಾರ ತಿಳಿಸಲಾಯಿತು. ಅವನನ್ನು ಮೇಲೆ ತಂದು ಪ್ರಥಮ ಪರೀಕ್ಷೆಗೆ ವೈದ್ಯರಿಗೊಪ್ಪಿಸಲಾಯಿತು. ಆ ನಂತರ ತಂದೆ ತಾಯಿಯರ ಬಳಿಗೆ ಅವನನ್ನು ಒಯ್ಯಲಾಯಿತು. ಈಗ ಚಿನ್ ತಂದೆತಾಯಿಯರ ಭದ್ರವಾದ ಅಪ್ಪುಗೆಯೊಳಗಿದ್ದನು. ಓ! ಎಷ್ಟೊಂದು ಸುರಕ್ಷಿತ! ಎಷ್ಟೊಂದು ನೆಮ್ಮದಿ! ಎಷ್ಟೊಂದು ಸಂತೋಷ!

ನಮ್ಮ ಸುತ್ತಮುತ್ತಲೂ ಕಳವಳಕ್ಕೊಳಗಾಗಿರುವ ಕೆಲವು ತಂದೆತಾಯಂದಿರನ್ನು ನಾವು ಕಾಣುತ್ತೇವೆ. ತಮ್ಮ ಮಕ್ಕಳನ್ನು ಕ್ರೈಸ್ತರಾಗಿ ತಿದ್ದಿ ಬೆಳೆಸಿದ ಅವರು ಮಕ್ಕಳನ್ನು ಪ್ರೀತಿಸಿ, ಸತ್ಯವೇದವನ್ನು ಓದಿ, ತಿಳಿಸಿ, ಅವರೊಂದಿಗೆ ಪ್ರಾರ್ಥಿಸಿ, ಕಾಲಕಾಲಕ್ಕೆ ತಕ್ಕ ಎಚ್ಚರಿಕೆಯನ್ನು ನೀಡುತ್ತಾ ಬೆಳೆಸಿದ್ದರೂ, ಒಂದು ದಿನ ತಮ್ಮ ಮಗುವು "ಕಳೆದುಹೋದದು" ಅವರಿಗೆ ತಿಳಿದುಬರುತ್ತದೆ. ಲೋಕದ ಆಕರ್ಷಣೆಗಳು ಬಣ್ಣಬಣ್ಣದ ಚಿಟ್ಟೆಗಳಂತೆ ಅವರನ್ನು ಅರಿವೇ ಇಲ್ಲದಂತೆ ಸನ್ಮಾರ್ಗದಿಂದ ದೂರದೂರಕ್ಕೆ ಕರೆದೊಯ್ಯುತ್ತದೆ.

ಸೃಷ್ಟಿಕರ್ತನು ತನ್ನ ಸಾರೂಪ್ಯದಲ್ಲಿ ನಮ್ಮನ್ನು ಸೃಷ್ಟಿಸಿದನೆನ್ನಲಾಗಿದೆ. ಆದರೆ ಮನುಷ್ಯನು ದಾರಿ ತಪ್ಪಿ ನಡೆದುದು ಸ್ಪಷ್ಟವಾಗಿದೆ. ಯೆಶಾಯ 53ರಲ್ಲಿ ಹೇಳಿದಂತೆ :

"ನಾವೆಲ್ಲರೂ ದಾರಿತಪ್ಪಿದ ಕುರಿಗಳಂತಿದ್ದೆವು ನಮ್ಮಲ್ಲಿ ಪ್ರತಿಯೊಬ್ಬನು ತನ್ನ ಸ್ವಂತ ಮಾರ್ಗಕ್ಕೆ ತಿರುಗಿಕೊಂಡಿದ್ದನು".

ನಮ್ಮ ಸೃಷ್ಟಿಕರ್ತನ ಆಳವಾದ ದಿವ್ಯ ಪ್ರೀತಿಯ ಕಾರಣದಿಂದ ನಮ್ಮ ಪಾಪಗಳಿಗಾಗಿ ಯೇಸುಸ್ವಾಮಿಯು ಕ್ರೂಜೆಗೆ ಒಯ್ಯಲ್ಪಟ್ಟನು. ನಮ್ಮ ದಾರಿ ತಪ್ಪುವಿಕೆಗಾಗಿ ನೊಂದ ಆತನು ನಮ್ಮನ್ನು ತಿರುಗಿ ತನ್ನ ಕಡೆಗೆ ನಡೆಸಲು ಪ್ರಾಣಕೊಟ್ಟನು. ಈಗಲೂ ನಮ್ಮನ್ನು ಹುಡುಕುತ್ತಲೇ ಇದ್ದಾನೆ. ನಾವು ಕೂಡಾ ಆ ಪುಟ್ಟ ಚಿನ್‌ನಂತೆ ನಮ್ಮ ರಕ್ಷಕನ ದಿವ್ಯ ರಕ್ಷಣೆಯ ಭದ್ರತೆಗೆ ಸೇರಿಕೊಳ್ಳಬಹುದು. ಆತನು ನಮ್ಮ ಮೊರೆಗೆ ಕಾಯುತ್ತಿದ್ದಾನೆ. ಲೂಕ 19:10ರಲ್ಲಿ ಹೇಳಿದಂತೆ **"ಮನುಷ್ಯ ಕುಮಾರನು ತಪ್ಪಿ ಹೋದದ್ದನ್ನು ಹುಡುಕಿ ರಕ್ಷಿಸುವುದಕ್ಕೆ ಬಂದನು".** ■